ತರಗತಿ : 9ನೇ ತರಗತಿ

ಪದ್ಯದ ಹೆಸರು : ಹೊಸಹಾಡು

ಕೃತಿಕಾರರ ಹೆಸರು : ಕಯ್ಯಾರ ಕಿಞ್ಞಣ್ಣ ರೈ

## ಕೃತಿಕಾರರ ಪರಿಚಯ :



ಕಯ್ಯಾರ ಕಿಞ್ಞಣ್ಣ ರೈ

ಕಯ್ಯಾರ ಕಿಞ್ಞಣ್ಣ ರೈ ಅವರು ( ಕ್ರಿಸ್ತ ಶಕ ೧೯೧೫ ) ಕಾಸರಗೋಡು ಜಿಲ್ಲೆಯ ಕಯ್ಯಾರ ಗ್ರಾಮದವರು . ಇವರ ಪ್ರಮುಖ ಕೃತಿಗಳೆಂದರೆ ; ಶ್ರೀಮುಖ , ಐಕ್ಯಗಾನ , ಪುನರ್ನವ ಚೇತನ ಮತ್ತು ಕೊರಗ , ಗಂಧವತಿ ಮುಂತಾದ ಕವನ ಸಂಕಲನಗಳು : ವಿರಾಗಿಣಿ ಎಂಬ ನಾಟಕ , ಅನ್ನದೇವರು ಮತ್ತು ಇತರ ಕತೆಗಳು ಎಂಬ ಸಣ್ಣಕಥಾ ಸಂಕಲನ : ರತ್ನಾಕರ , ಪರಶುರಾಮ , ಎ . ಬಿ . ಶೆಟ್ಟಿ ಎಂಬ ಜೀವನ ಚರಿತ್ರೆಗಳು , ದುಡಿತವೇ ನನ್ನ ದೇವರು ಎಂಬ ಆತ್ಮಕಥೆ , ಗೋವಿಂದ ಪೈ – ಸ್ಮೃತಿ ಕೃತಿ , ಸಾಹಿತ್ಯ ದೃಷ್ಟಿ - ವಿಮರ್ಶಾ ಕೃತಿ , ಪಂಚಮಿ – ಅನುವಾದ ಕೃತಿ ಮುಂತಾದವು .

ಇವರಿಗೆ ೧೯೬೯ ರಲ್ಲಿ ಕರ್ನಾಟಕ ಸಾಹಿತ್ಯ ಆಕಾಡೆಮಿ ಪ್ರಶಸ್ತಿ , ೨೦೦೫ ರಲ್ಲಿ ಆಳ್ವಾಸ್ ನುಡಿಸಿರಿ ಪ್ರಶಸ್ತಿ , ೨೦೦೬ ರಲ್ಲಿ ನಾಡೋಜ ಪ್ರಶಸ್ತಿ ಮುಂತಾದ ಪ್ರಶಸ್ತಿ ಗೌರವಗಳು ಲಭಿಸಿವೆ . ಇವರು ಮಂಗಳೂರಿನಲ್ಲಿ ನಡೆದ ಆರವತ್ತಾರನೆಯ ಅಖಿಲ ಭಾರತ ಕನ್ನಡಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು . ಪ್ರಸ್ತುತ ಪದ್ಯವನ್ನು ಕಯ್ಯಾರ ಕಿಞ್ಞಣ್ಣ ರೈ ಅವರು ಸಂಪಾದಿಸಿರುವ ಶತಮಾನದ ಗಾನ ಕವನಸಂಕಲನ ದಿಂದ ಆರಿಸಿಕೊಳ್ಳಲಾಗಿದೆ .

## ಅ ] ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿ ,

**1 )** ಕಡಿದೊಗೆಯಬೇಕಾದ ಪಾಶಗಳು ಯಾವುವು **?**

ಉತ್ತರ : ಜಾತಿ - ಕುಲ - ಮತ - ಧರ್ಮ ಎಂಬ ಪಾಶಗಳನ್ನು ಕಡಿದೊಗೆಯಬೇಕು .

**2 )** ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು **?**

ಉತ್ತರ : ಕವಿ ನವಭಾವ - ನವಜೀವ - ನವಶಕ್ತಿ ತುಂಬಿಸುವ ಹಾಡನ್ನು ಹಾಡಬೇಕು ಎಂದಿದ್ದಾರೆ .

**3 )** ಬಾನು ಬುವಿ ಯಾವುದರಿಂದ ಬೆಳಗಬೇಕು **?**

kannadapdf.com

ಉತ್ತರ : ಜಡನಿದ್ರೆಯಿಂದ ಎಚ್ಚರಗೊಂಡು ವೀರ ಅಟ್ಟಹಾಸದಲ್ಲಿ ಬಾನು - ಬುವಿ ಬೆಳಗಬೇಕು .

**4 ) ವೀರಧ್ವನಿ ಹೇಗೆ ಏರಬೇಕು ?**

ಉತ್ತರ : ಬಹಳ ಗಂಭೀರವಾದ ಭಾವನೆಯ ಅಲೆಗಳನ್ನು ಹರಡಿ ವೀರಧ್ವನಿ ಏರಬೇಕು .

**5 ) ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು ?**

ಉತ್ತರ : ಹಾಡು ನುಡಿಗುಂಡುಗಳು ಭಯದ ಬೆನ್ನಟ್ಟಬೇಕು .

## ಆ ] ಕೊಟ್ಟಿರುವ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯದಲ್ಲಿ ಉತ್ತರಿಸಿ ,

**1 ) ಈ ಹಾಡು ಹೊಸತು ಎಂದು ಕವಿ ಹೇಳಲು ಕಾರಣವೇನು ?**

ಉತ್ತರ : ಈ ಹೊಸ ಹಾಡು ಇದೇ ಮೊದಲ ಹಾಡಾಗಿದ್ದು ಇದಕ್ಕೂ ಮೊದಲು ಇಂತಹ ಹಾಡು ಇರಲಿಲ್ಲ . ಅಂದಿನ ಕಷ್ಟಗಳು ಅಂದಂದೇ ಮುಗಿದಿವೆ . ಇಂದು ಅವುಗಳ ಗೊಡವೆ ಇಲ್ಲ . ಆದ್ದರಿಂದ ಈ ಹಾಡು ಹೊಸತು ಹಾಡು ಎಂದು ಕವಿ ಹೇಳಿದ್ದಾರೆ .

**2 ) ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಬಯಸುತ್ತಾರೆ ?**

ಉತ್ತರ : ಹೊಸ ಭಾವನೆಯನ್ನು ಮೂಡಿಸುವ , ಹೊಸ ಚೈತನ್ಯ , ಹೊಸ ಶಕ್ತಿಯನ್ನು ತುಂಬಿಸುವ ಹಾಡನ್ನು ಹಾಡಬೇಕು . ಅಂತಹ ಹಾಡನ್ನು ಹಾಡಿದಾಗ ಬಹಳ ಗಂಭೀರವಾದ ಭಾವನೆಯ ತರಂಗಗಳು ಹರಡಿ ವೀರಧ್ವನಿಯೇರಬೇಕು ಎಂದು ಕವಿ ಬಯಸುತ್ತಾರೆ .

**3 ) ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾರೆ ?**

ಉತ್ತರ : ಜಾತಿ - ಕುಲ - ಮತ - ಧರ್ಮ ಎಂಬ ಪಾಶಗಳನ್ನು ಕಡಿದೊಗೆದು ಉತ್ಸಾಹದಿಂದ ಎದೆಹಿಗ್ಗಿ ಹಾಡಬೇಕು . ಆ ಹಾಡು ಯುಗಯುಗಗಳಾಚೆಗೂ ಜಗತ್ತಿನ ಮೂಲೆ ಮೂಲೆಗೂ ತಲುಪುವಂತ ಹಾಡು ಗುಡುಗಬೇಕು ಎಂದು ಕವಿ ಆಶಿಸುತ್ತಾರೆ .

## ಇ ] ಕೊಟ್ಟಿರುವ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ ,

**1 ) ಹೊಸಹಾಡು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ ,**

ಬದುಕಿಗೆ ಹೊಸ ತಿರುವನ್ನು ನೀಡಬಲ್ಲ , ಹೊಸ ಆಶಯವನ್ನು ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ . ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲ ಹೊಸ ಹಾಡನ್ನು ಹಾಡಬೇಕು . ನಮ್ಮನ್ನು ಬಿಗಿದಿರುವ ಜಾತಿ - ಕುಲ - ಮತ - ಧರ್ಮ ಎಂಬ ಪಾಶಗಳನ್ನು ಕತ್ತರಿಸಿ ಉತ್ಸಾಹದಿಂದ ಹಾಡಬೇಕು . ಆ ಸಮಾನತಾ ಭಾವವು ಯುಗಯುಗಗಳಲ್ಲಿ ಜಗತ್ತಿನ ಮೂಲೆ ಮೂಲೆಯನ್ನು ತಲುಪಬೇಕು . ಆ ಹೊಸ ಹಾಡನ್ನು ಉನ್ನತ ಶಿಖರದ ತುದಿಯಲ್ಲಿ ನಿಂತು ಹಾಡಿದಾಗ ಅದರ ನುಡಿಗುಂಡುಗಳು ದಶದಿಕ್ಕಿಗೂ ಸಿಡಿದು ಜನರಲ್ಲಿ ತುಂಬಿರುವ ಭಯವನ್ನು ಓಡಿಸಬೇಕು . ಗಂಡೆದೆಯ ಗರ್ಜನೆಗೆ ನಮ್ಮ ದೇಶದ ಕೋಟ್ಯಂತರ ಜನರು ದನಿಗೂಡಿಸಬೇಕು . ಆ ಒಕ್ಕೊರಲಿನ ಏಕತಾಭಾವದ ಪ್ರತಿಧ್ವನಿಯು ಭೂಮಿ - ಆಕಾಶವನ್ನು ಆವರಿಸಬೇಕು . ಜಡತ್ವದಿಂದ ಕೂಡಿರುವ ಜನರು ಎಚ್ಚೆತ್ತು ಅಂಧಕಾರದ ಕತ್ತಲೆಯಿಂದ ಆವರಿಸಲ್ಪಟ್ಟಿರುವ ಬಾನು ಭೂಮಿಯನ್ನು ಬೆಳಗಬೇಕು . ಪ್ರತಿಯೊಬ್ಬರ ನಡೆ - ನುಡಿಯಲ್ಲಿ ಕ್ರಾಂತಿಯ ಕಿಡಿ ಕೆರಳಬೇಕು , ಜಯವನ್ನು ಹೊಂದಿದ ಮಾತೆಯೇ ನೀನು ಹೆದರದೆ ಧೈರ್ಯದಿಂದ ತಲೆ ಎತ್ತಿ ನೋಡು , ಹಿಂದಿನ ಪಾಡು ಹಿಂದೆಯೇ ಮುಗಿಯಿತು . ಇದೇ ಮೊದಲು , ಇದಕ್ಕಿಂತ ಮುಂಚೆ ಇಂತಹ ಹಾಡು ಇರಲಿಲ್ಲ . ಆದ್ದರಿಂದ ಇಂದು ಇದೇ ಹೊಸಹಾಡು ಎಂದು ಹೇಳುತ್ತಾ ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ .

ಇಂತಹ ಸ್ಫೂರ್ತಿಯ ಚಿಲುಮೆಯಾಗುವ ಹಾಡನ್ನು ಹಾಡಬೇಕು , ಅದು ನಿತ್ಯ ನೂತನವಾಗಿರಬೇಕೆಂಬುದು ಪದ್ಯದ ಆಶಯವಾಗಿದೆ .

## ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ .

**1 ) " ಯುಗಯುಗಗಳಾಚೆಯಲಿ ಲೋಕಲೋಕಾಂತರದಲ್ಲಿ ಆ ಹಾಡು ಗುಡುಗಬೇಕು "**

ಉತ್ತರ : ಆಯ್ಕೆ : ಈ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈ ಅವರ ಶತಮಾನದ ಗಾನ ಕವನಸಂಕಲನ ದಿಂದ ಆರಿಸಲಾಗಿರುವ ' ಹೊಸಹಾಡು ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಳಾಗಿದೆ . ಸಂದರ್ಭ : ನಮ್ಮನ್ನು ಬಿಗಿದಿರುವ ಜಾತಿ - ಕುಲ - ಮತ - ಧರ್ಮ ಎಂಬ ಪಾಠಗಳನ್ನು ಕತ್ತರಿಸಿ ಉತ್ಸಾಹದಿಂದ ಹಾಡಬೇಕು . ಎಂದು ಹೇಳುವ ಸಂದರ್ಭದಲ್ಲಿ ಕವಿ ಆ ಸಮಾನತಾ ಭಾವವು ' ಯುಗಯುಗಗಳಲ್ಲಿ ಜಗತ್ತಿನ ಮೂಲೆ ಮೂಲೆಯನ್ನು ತಲುಪಬೇಕು ' ಎಂದು ಹೇಳಿದ್ದಾರೆ .

ಸ್ವಾರಸ್ಯ : ಜಾತಿ - ಕುಲ - ಮತ - ಧರ್ಮ ಎಂಬ ಕಟ್ಟಳೆಗಳನ್ನು ಮೀರಿ ನಮ್ಮಲ್ಲಿ ಮನುಜ ಮತದ ಭಾವನೆ ಮೂಡಬೇಕು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ .

**2 ) " ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು "**

ಉತ್ತರ : ಆಯ್ಕೆ : ಈ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈ ಅವರ ಶತಮಾನದ ಗಾನ ಕವನಸಂಕಲನ ದಿಂದ ಆರಿಸಲಾಗಿರುವ ಹೊಸಹಾಡು ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಳಾಗಿದೆ . ಸಂದರ್ಭ : ಬದುಕಿಗೆ ಹೊಸ ತಿರುವನ್ನು ನೀಡಬಲ್ಲ . ಹೊಸ ಆಶಯವನ್ನು ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ ಹಾಡನ್ನು ಹಾಡಬೇಕು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ . ಹೊಸಹಾಡು ಹಾಡಿದಾಗ ಬಹಳ ಗಂಭೀರವಾದ ಭಾವನೆಯು ಎಲ್ಲೆಡೆ ಹರಡಿ ವೀರಧ್ವನಿ ಏರಬೇಕು ಎಂದು ಕವಿ ಹೇಳಿದ್ದಾರೆ .

ಸ್ವಾರಸ್ಯ : ಹೊಸ ಹಾಡನ್ನು ಕೇಳಿದವರಲ್ಲಿ ವೀರತ್ವ ಮೂಡಬೇಕು ಎಂಬುದನ್ನು ವೀರಧ್ವನಿ ಏರಬೇಕು ಎಂದು ಕವಿ ಹೇಳಿರುವುದು ಸ್ವಾರಸ್ಯವಾಗಿದೆ .

**3 ) " ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲ್ಲಿ ಬಾನು ಬುವಿ ಬೆಳಗಬೇಕು "**

**" ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು "**

ಉತ್ತರ : ಆಯ್ಕೆ : ಈ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈ ಅವರ ಶತಮಾನದ ಗಾನ ಕವನಸಂಕಲನ ದಿಂದ ಆರಿಸಲಾಗಿರುವ ಹೊಸಹಾಡು ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಳಾಗಿದೆ . ತಮಾನದ ಶಾಸ ಸಂದರ್ಭ : ನಮ್ಮ ನಡೆ - ನುಡಿಗಳಲ್ಲಿ ಕ್ರಾಂತಿ ( ಬದಲಾವಣೆಯನ್ನು ಉಂಟುಮಾಡಬೇಕಾಗಿರುವುದರ ಬಗ್ಗೆ ತಿಳಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ . ನಾವು ಜಡನಿದೆಯಿಂದ ಎಚ್ಚೆತ್ತುಕೊಂಡು ವೀರ ಅಟ್ಟಹಾಸದಿಂದ ಬಾನು ಮತ್ತು ಭೂಮಿಯನ್ನು ಬೆಳಗಬೇಕು ಹಾಗೂ ನಮ್ಮ ಪ್ರತಿ ಹೆಜ್ಜೆಯಲ್ಲೂ ಕ್ರಾಂತಿಯನ್ನುಂಟುಮಾಡಬೇಕು ಎಂದು ಕವಿ ಹೇಳಿದ್ದಾರೆ .

ಸ್ವಾರಸ್ಯ : ಒಳ್ಳೆಯ ಬದಲಾವಣೆಯನ್ನು ಉಂಟುಮಾಡಬೇಕಾದತ ಮೊದಲು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ .



kannadapdf.com

**4 ) " ಇದೋ ಮೊದಲು ಮುನ್ನಿಲ್ಲ ಮುಗಿದುದಂದಿನ ಪಾಡು ಹೊಸತಿಂದು ಹೊಸತು ಹಾಡು "**

ಉತ್ತರ : ಆಯ್ಕೆ : ಈ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈ ಅವರ ಶತಮಾನದ ಗಾನ ಕವನಸಂಕಲನ ದಿಂದ ಆರಿಸಲಾಗಿರುವ ಹೊಸಹಾಡು ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ . ಸಂದರ್ಭ : ಕವಿಯು ಹೊಸಹಾಡಿನ ಬಗ್ಗೆ ಹೇಳುತ್ತಾ ಜಯಜನನಿಯಾದ ಭಾರತಾಂಬೆಯನ್ನು ಕುರಿತು " ಶಿರವೆತ್ತಿ ವೀರಭರವಸೆಯಿಂ ಹೊಸಹಾಡನ್ನು ಕೇಳು " ಎಂದು ಹೇಳುವ ಸಂದರ್ಭದಲ್ಲಿ ಹಿಂದಿನ ಪಾಡು ಹಿಂದೆಯೇ ಮುಗಿಯಿತು . ಇದೇ ಮೊದಲು . ಇದಕ್ಕಿಂತ ಮುಂಚೆ ಇಂತಹ ಹಾಡು ಇರಲಿಲ್ಲ . ಆದ್ದರಿಂದ ಇಂದು ಇದೇ ಹೊಸಹಾಡು ಎಂದು ಹೇಳಿದ್ದಾರೆ .

ಸ್ವಾರಸ್ಯ : ಹಿಂದೆ ಆಗಿರುವ ಹಳೆಯದನ್ನು ನೆನೆಯುತ್ತಾ ಇಂದಿನ ಅವಕಾಶದಿಂದ ವಂಚಿತರಾಗಬಾರದು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ .

## ಉ ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ .

1. ಧ್ವನಿ : ದನಿ::ಯುಗ:……………………..

2. ಲೋಕಾಂತರ : ಸವರ್ಣದೀರ್ಘ ಸಂಧಿ :: ಉನ್ನತೋನ್ನತ :……….

3. ಬಾನು:ಆಕಾಶ ::ಭಾನು:……….

1. ಜುಗ, 2.ಗುಣಸಂಧಿ 3. ಸೂರ್ಯ

## ಊ ) ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ .

ಹೊಸಹಾಡು ' ಪದ್ಯದ ಆಕರ ಗ್ರಂಥ……………

( ಪುನರ್ನವ . ಚೇತನ , ಕೊರಗ. ಶತಮಾನದಗಾನ )

2. ' ಹೊಸಹಾಡು ' ಪದ್ಯದ ಕವಿ,,,,,,,,,

( ಗೋಪಾಲಕೃಷ್ಣ ಅಡಿಗ , ಕಯ್ಯಾರ ಕಿಞ್ಞಣ್ಣ ರೈ , ದ.ರಾ. ಬೇಂದ್ರೆ , ಜಿ . ಎಸ್ . ಶಿವರುದ್ರಪ್ಪ )

3 ಉನ್ನತೋನ್ನತ…………ಶಿಖರವನೇರಿ ಹಾಡಲ್ಲಿ ಹಾಡಬೇಕು)

( ಹಿಮಾಲಯ ,ಘನಹಿವಾದಿ, ಸಹ್ಯಾದ್ರಿ , ವಿಂಧ್ಯಾ )

4 …………….ಧರ್ಮಪಾಶಗಳ ಕಡಿದೊಗೆದು ಎದೆಹಿಗ್ಗಿ ಹಾಡಬೇಕು ( ಜಾತಿ – ಕುಲ – ಮತ ,ಮೇಲು – ಕೀಳು,ಬಡವ – ಬಲ್ಲಿದ , ಹಳ್ಳಿ – ಪಟ್ಟಣ )

ಸರಿ ಉತ್ತರಗಳು

1. ಶತಮಾನದ ಗಾನ

2. ಕಯ್ಯಾರ ಕಿಞಣ್ಣ ರೈ ,

3. ,ಘನಹಿಮಾದಿ

4. ಜಾತಿ – ಕುಲ ಮತ

## ಭಾಷಾ ಚಟುವಟಿಕೆ

**1** ಅಲಂಕಾರದ ಎರಡು ವಿಧಗಳನ್ನು ಹೆಸರಿಸಿ **,**

ಉತ್ತರ : ಅಲಂಕಾರದಲ್ಲಿ ಎರಡು ವಿಧ ಅದು ಅರ್ಥಾಲಂಕಾರ ಮತ್ತು ತಬ್ದಾಲಂಕಾರ ,

**2. “** ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು **–** ಇಲ್ಲಿರುವ ಅಲಂಕಾರವನ್ನು ಗುರುತಿಸಿ **,** ಲಕ್ಷಣದೊಂದಿಗೆ ಸಮನ್ವಯಗೊಳಿಸಿ

ಅಲಂಕಾರ **:**ಉಪಮಾಲಂಕಾರ

ಉಪಮೇಯ**:**ಬಾನಿನಲ್ಲಿ ಗಾಳಿಪಟಗಳು

ಉಪಮಾನ**:**ಹಕ್ಕಿಗಳು

ಉಪಮಾವಾಚಕ **:**ಅಂತೆ

ಸಮಾನಧರ್ಮ**:**ಹಾರಾಡುವುದು

ಸಮನ್ವಯ**:** ಉಪಮೇಯವಾದ ಬಾನಿನಲ್ಲಿ ಗಾಳಿಪಟಗಳನ್ನು ಉಪಮಾನವಾದ ಹಕ್ಕಿಗಳಿಗೆ ಹೋಲಿಸಿ ವರ್ಣಿಸಲಾಗಿದೆ . ಎಂಬ ಉಪಮಾವಾಚಕ ಪದವಿದ್ದು , ಹಾರಾಡುತ್ತಿದ್ದವು ಎಂಬ ಇರುವದರಿಂದ ಇದು ಉಪಮಾಲಂಕಾರ

### **3.** ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ

ನವಭಾವ – ನವಜೀವ ನವಶಕ್ತಿ ತುಂಬಿಸುವ ಹಾಡೊಮ್ಮೆ ಹಾಡಬೇಕು ;

ತೀವ್ರತರ ಗಂಭೀರ ಭಾವನೆಯ ತಲೆ ಮಸಗಿ ವೀರಧ್ವನಿಯೇರಬೇಕು ;

ಜಾತಿ – ಕುಲ – ಮತ – ಧರ್ಮ ಪಾಶಗಳ ಕಡಿದೊಗೆದು ಎದೆಹಿಗ್ಗಿ ಹಾಡಬೇಕು;

ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ ಆ ಹಾಡು ಗುಡುಗಬೇಕು.

ಉನ್ನತೋನ್ನತ ಘನ ಹಿಮಾದ್ರಿ ಶಿಖರವನೇರಿ ಹಾಡಲ್ಲಿ ಹಾಡಬೇಕು ;

ಹಾಡು ನುಡಿಗುಂಡುಗಳು ಹಾರಿ ದಶದಿಕ್ಕಿನಲ್ಲಿ ಭಯದ ಬೆನ್ನಟ್ಟಬೇಕು ;



KannadaPdf.com